

**ಮಕ್ಕಳ ಕಣ್ಣು, ಮಾನಸಿಕ ಆರೋಗ್ಯದ ಮೇಲೆ ಆನ್‌ಲೈನ್ ತರಗತಿಗಳ ಕರಿನೆರಳು**

# ಆನ್‌ಲೈನ್ ಮಾಧ್ಯಮ ಪಾಠವೋ ಕಾಟವೋ...

‘ಕಂಪ್ಯೂಟರ್ ಬ್ರಹ್ಮ, ಮೊಬೈಲ್ ಗುರು, ಟೀವಿ ದೇವೋಭವ’ ಎನ್ನುವುದು ಆನ್‌ಲೈನ್ ಶಿಕ್ಷಣದ ಸಂದರ್ಭಕ್ಕೆ ಹೊಂದಬಹುದಾದ ವಿನೋದದ ಮಾತು. ಕೊರೊನಾ ಸೋಂಕಿನ ಆತಂಕದಿಂದಾಗಿ ಮಕ್ಕಳು ಮನೆಯಲ್ಲಿಯೇ ಉಳಿಯಬೇಕಾಗಿ ಬಂದಿರುವ ಸಂದರ್ಭ, ಆನ್‌ಲೈನ್ ಶಿಕ್ಷಣವನ್ನು ಅನಿವಾರ್ಯವಾಗಿಸಿದೆ. ಆನ್‌ಲೈನ್ ಕಲಿಕೆಯ ಮೂಲಕ ಈ ತಲೆಮಾರಿನ ಮಕ್ಕಳೆಲ್ಲ ಹೈಟೆಕ್ ಆದರು ಎಂದು ಭಾವಿಸುವಂತಿಲ್ಲ. ನಿಸ್ತಂತು ಶಿಕ್ಷಣಮಾಧ್ಯಮ ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಗಂಭೀರ ಚರ್ಚೆಗೆ ಕಾರಣವಾಗಿದೆ.

■ ಗಣೇಶ ವೈದ್ಯ

‘ಮೊದಲೆಲ್ಲ ಶಾಲೆಗಳಿಗೆ ಮೊಬೈಲ್ ತರುವಂತಿರಲಿಲ್ಲ. ಈಗ ಶಾಲೆಯೇ ಪೂರ್ತಿಯಾಗಿ ಮೊಬೈಲ್ ಒಳಗೆ ಬಂದಿದೆ.’

ಇದು ಇತ್ತೀಚಿನ ದಿನಗಳಲ್ಲಿ ವಾಟ್ಸ್‌ಆ್ಯಪ್‌ಗಳಲ್ಲಿ ಹರಿದಾಡಿದ ಜೋಕ್. ನೋಡಿ ನಕ್ಕು ಸುಮ್ಮನಾಗುವಂತಿಲ್ಲ; ಆ ಜೋಕ್ ವಾಸ್ತವಕ್ಕೆ ಹಿಡಿದ ಕನ್ನಡಿಯೂ ಹೌದು.

ಕೋವಿಡ್‌ನಿಂದಾಗಿ ಮಕ್ಕಳು ಮನೆಯಿಂದ ಹೊರಗೆ ಹೋಗಿ ಆಟವಾಡುವ ಪರಿಸ್ಥಿತಿ ಇಲ್ಲ. ಶಾಲೆಗಳು ಯಾವಾಗ ತೆರೆಯುತ್ತವೆ ಎಂಬುದೂ ಗೊತ್ತಿಲ್ಲ. ಶಾಲೆಗಳು ತೆರೆದರೂ ಮಕ್ಕಳನ್ನು ಕಳುಹಿಸುವ ಧೈರ್ಯ ಪಾಲಕರಿಗಿಲ್ಲ. ಇಂಥ ಸಂದಿಗ್ಧ ಸಂದರ್ಭದಲ್ಲಿ ಮಕ್ಕಳನ್ನು ಶಿಕ್ಷಣದಿಂದ ಸಂಪೂರ್ಣ ವಿಮುಖರಾಗದಂತೆ ನೋಡಿಕೊಳ್ಳುವ ಪ್ರಯತ್ನದಲ್ಲಿ ಶಿಕ್ಷಣ ವ್ಯವಸ್ಥೆ ಇದೆ. ಅಂಥದೊಂದು ಪ್ರಯತ್ನ ಆನ್‌ಲೈನ್ ಶಿಕ್ಷಣ.

ಆನ್‌ಲೈನ್ ಶಿಕ್ಷಣ ಸೌಲಭ್ಯವನ್ನು ಮಕ್ಕಳಿಗೆ ತಲುಪಿಸುವ ಸಾಧನಗಳು ಮೊಬೈಲ್, ಟೀವಿ ಹಾಗೂ ಕಂಪ್ಯೂಟರ್. ವಿಪರ್ಯಾಸವೆಂದರೆ ಮಕ್ಕಳನ್ನು ಯಾವುದರಿಂದ ದೂರ ಇಡಬೇಕು ಎಂದು ಇದುವರೆಗೆ ಹೇಳುತ್ತಿದ್ದೆವೋ ಅದನ್ನೇ ಈಗ ಅವರ ಕಲಿಕೆಯ ಮಾಧ್ಯಮವಾಗಿಸುವ ಹಂತದಲ್ಲಿ ನಾವಿದ್ದೇವೆ.

ಲಾಕ್‌ಡೌನ್ ಪರಿಣಾಮವೆಂಬಂತೆ ಮಕ್ಕಳು ನಾಲ್ಕು ಗೋಡೆಯ ಮಧ್ಯವೇ ಇದ್ದು ಬೇಸರಗೊಂಡು ಮೊಬೈಲ್ ನೋಡುವುದು, ವಿಡಿಯೊ ಗೇಮ್ ಆಡುವುದು ಎಲ್ಲರ ಮನೆಗಳಲ್ಲೂ ಸಾಮಾನ್ಯವಾಗಿಬಿಟ್ಟಿದೆ. ಈಗ ಆನ್‌ಲೈನ್ ಶಿಕ್ಷಣದಿಂದಾಗಿ ಮಕ್ಕಳು ಇನ್ನಷ್ಟು ಸಮಯವನ್ನು ಡಿಜಿಟಲ್ ಪರದೆಗಳ ಮುಂದೆ